4. ವಾಣಿಜ್ಯ ಮಳಿಗೆಗಳ ಕಟ್ಟಡ ಕೆಲಸ ಪ್ರಗತಿಯಲ್ಲಿದೆ. 2

3. ಪ್ರಧಾನಮಂತ್ರಿಗಳ ಸಮಗ್ರ ಬಡತನ ನಿರ್ಮೂಲನೆ ಯೋಜನೆಯ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳು :

1. ಖಡಿ ಗರಸು ಹಾಕಿ ರಸ್ತೆಗಳ ನಿರ್ಮಾಣ ಮಾಡಿದ್ದು 3

2. ಚರಂಡಿ ನಿರ್ಮಾಣ ಹಾಗೂ ದುರಸ್ತಿ 3

3. ಬೀದಿ ದೀಪಗಳ ದುರಸ್ತಿ ವ್ಯವಸ್ಥೆ 75 ಟ್ಯೂಬ್‌ಸೆಟ್
1. ಸೋಡಿಯಂ ಲ್ಯಾಂಪ್
1. ಮರ್‌ಕ್ಯೂರಿ ಲ್ಯಾಂಪ್

4. ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಡಿಯಲ್ಲಿ :

1. ರಿ.ಸ.ನಂ.130 ಬೆಳಗಾವ್-ರಾಯಚೂರು ರಸ್ತೆಯಿಂದ 1 ಬಿ.ವಿ.ಕಾಲೇಜ್ 1
ಕಾಲನಿಯವರೆಗೆ ರಸ್ತೆ ನಿರ್ಮಿಸುವುದು (ಸದರಿ ಯೋಜನೆ ಯಡಿಯಲ್ಲಿ)
ಕೈಗೊಂಡ ಕಾಮಗಾರಿಗಳಲ್ಲಿ ಉಳಿಕೆ ಮೊತ್ತದಲ್ಲಿ ಕೈಗೊಳ್ಳಲು ಆಡಳಿತಾತ್ಮಕ
ಮಂಜೂರಿ ದೊರಕಿದೆ.

ಇ) ಸದರಿ ಕಾಮಗಾರಿಗಳು ಈಗ ಮುಗಿಯವ ಹಂತದಲ್ಲಿ ಇರುತ್ತವೆ.

ಬೀದರ್ ಜಿಲ್ಲೆಯಲ್ಲಿ ಕುಡಿಯುವ ನೀರಿನ ಯೋಜನೆ

407 - ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ವತಿಯಿಂದ ಕುಡಿಯುವ ನೀರಿನ ಯೋಜನೆಗಳು ಕಾರ್ಯಗತವಾಗುತ್ತಿವೆ. (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಈ ಯೋಜನೆಗಳಿಗೆ ಒದಗಿಸಲಾಗಿರುವ ಹಣವೆಷ್ಟು? (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು).

ಇ) ಬಾಲ್ಕಿ ಪಟ್ಟಣದಲ್ಲಿ ಬೇಸಿಗೆಯ ಸಮಯದಲ್ಲಿ ತೀವ್ರವಾದ ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತಿದ್ದು ಇದನ್ನು ಪರಿಹರಿಸಲು ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಶಾಶ್ವತ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಂಡಿದೆಯೇ?

ಈ) ಇಲ್ಲವಾದಲ್ಲಿ ಕಾರಣಗಳೇನು?

ಉ) ಇಂತಹ ಯೋಜನೆಗಳನ್ನು ತೆಗೆದುಕೊಳ್ಳುವ ವಿಚಾರ ಸರ್ಕಾರದ ಮುಂದಿದೆಯೇ?

ಊ) ಇದ್ದರೆ ಯಾವಾಗ ಈ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು?

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) ಭಾಲ್ಕಿ ಮತ್ತು ಔರಾದ್ ಪಟ್ಟಣಗಳನ್ನು ಹೊರತುಪಡಿಸಿ ಬೀದರ್ ಬಸವಕಲ್ಯಾಣ ಚಿಟುಗುಪ್ಪ ಹುಮ್ನಾಬಾದ್ ನಗರ/ಪಟ್ಟಣಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತ ಗೊಳಿಸಲಾಗುತ್ತಿದೆ.

ಆ)	ಬೀದರ್	-	390.57 ಲಕ್ಷ
	ಬಸವಕಲ್ಯಾಣ	-	345.91 ಲಕ್ಷ
	ಹುಮ್ನಾಬಾದ್	-	258.00 ಲಕ್ಷ
	ಚಿಟಗುಪ್ಪ	-	93.00 ಲಕ್ಷ

ಇ) ಹೌದು. ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಒಂದು ಯೋಜನೆಯನ್ನು ತಯಾರಿಸುತ್ತಿದೆ.

ಈ) ಉದ್ಭವಿಸುವುದಿಲ್ಲ.

ಉ) ಇಲ್ಲ.

ಊ) ಯೋಜನಾ ವರದಿಯು ಕರ್ನಾಟಕ ಜಲಮಂಡಳಿಯಲ್ಲಿ ತಯಾರಿಕಾ ಹಂತದಲ್ಲಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಕರಿಕಲ್ಲು ತೆಗೆಯಲು ಪರವಾನಗಿ

408 - ಶ್ರೀ ರಾಜುಗೌಡ (ಹನೂರು) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಚಾಮರಾಜನಗರ ಜಿಲ್ಲೆಯ ಯಾವ ತಾಲ್ಲೂಕಿನಲ್ಲಿ ಪಟ್ಟಾ ಭೂಮಿಯಿಂದ ಕರಿಕಲ್ಲು ತೆಗೆಯಲು ಪರವಾನಗಿ ನೀಡಲಾಗಿದೆ?*
2. *ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯವೆಷ್ಟು?*
3. *ಕೊಳ್ಳೇಗಾಲ ತಾಲ್ಲೂಕಿಗೆ ಈ ಸೌಲಭ್ಯವನ್ನು ನೀಡದಿರಲು ಕಾರಣವೇನು?*

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಚಾಮರಾಜನಗರ ಜಿಲ್ಲೆಯಲ್ಲಿ, ಚಾಮರಾಜನಗರ ತಾಲ್ಲೂಕು, ಯಳಂದೂರು ತಾಲ್ಲೂಕು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಕರಿಕಲ್ಲು ತೆಗೆಯಲು ಪರವಾನಗಿ ನೀಡಲಾಗಿದೆ.